# ಹೀಗೂ ಉಂಟೆ?

★ ಬೆಳಿಗ್ಗೆ ಎದ್ದ ತಕ್ಷಣ ಭಿಕ್ಷುಕ ಫೋರ್ಬ್ಸ್ ಪಟ್ಟಿಯಲ್ಲಿ ತನ್ನ ಹೆಸರಿದೆಯೇ ಎಂದು ಹುಡುಕುತ್ತಿದ್ದರೆ ಆತನನ್ನು ಆಶಾವಾದಿ ಎನ್ನಬೇಡಿ...
-ಆಗ ಆತನ ಹೆಂಡತಿ ಹುಚ್ಚಾಸ್ಪತ್ರೆಯ ನಾಪತ್ತೆ ಪಟ್ಟಿಯಲ್ಲಿ ಆತನನ್ನು ಹುಡುಕುತ್ತಿದ್ದಾಳೆ ಎಂದರ್ಥ.

★ ಪೊಲೀಸ್ ನಾಯಿ ನೆಲ ಮೂಸುತ್ತಿದ್ದರೆ ಅದು ಅಪರಾಧಿಯ ಬೆನ್ನು ಹತ್ತಲು ತಯಾರಿ ಎಂದರ್ಥ.
-ರಾಜಕಾರಣಿ ನೆಲ ಮೂಸುತ್ತಿದ್ದರೆ ಭೂಮಿಯಡಿಯ ಅದಿರಿಗೆ ಕನ್ನ ತೋಡಲು ತಯಾರಿ ಎಂದರ್ಥ.

★ ದೇವರು ಮತ್ತು ನಾಸ್ತಿಕ ಏಕಕಾಲಕ್ಕೆ ನಿಮ್ಮ ಮನೆಯ ಬಾಗಿಲು ತಟ್ಟಿದರೆ ದೇವರನ್ನು ಮೊದಲು ಒಳಗೆ ಕರೆಯಿರಿ.
-ಏಕೆಂದರೆ ನಾಸ್ತಿಕ ತಲೆ ತಿನ್ನುತ್ತಾನೆ. ದೇವರು ನೀವು ಪ್ರೀತಿಯಿಂದ ಏನನ್ನೂ ನೀಡಿದರೂ ತಿನ್ನುತ್ತಾನೆ.

★ ಓದು, ಬರಹದ ಶತ್ರು ಎಂದು ತಿ.ನಂ.ಶ್ರೀ ಹೇಳುತ್ತಿದ್ದರಂತೆ.
-ಇದನ್ನು ಈಗಿನ ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸಿ ಪರೀಕ್ಷೆಯ ಸಂದರ್ಭದಲ್ಲಿ ಕಡಿಮೆ ಓದಿ ಪುಟಗಟ್ಟಲೆ ಉತ್ತರ ಬರೆಯುತ್ತಾರೆ.

★ ಮಕ್ಕಳಾಗಿದ್ದಾಗ ನಾವು ಪ್ರಶ್ನೆ ಕೇಳುತ್ತಿದ್ದೆವು. ಅಮ್ಮ ಉತ್ತರ ಹೇಳುತ್ತಿದ್ದಳು.
-ಈಗಿನ ಮಕ್ಕಳು ಪ್ರಶ್ನೆ ಕೇಳುತ್ತಾರೆ. ಕರೆಂಟ್ ಇದ್ದರೆ ಇಂಟರ್‌ನೆಟ್ ಉತ್ತರ ಕೊಡುತ್ತದೆ.




★ ಕೋಟು ಹಾಕಿದಾತ ಪ್ಯಾಂಟ್ ಬದಲು ಪಟಾಪಟಿ ಚೆಡ್ಡಿ ಹಾಕಿಕೊಂಡರೂ ನಡೆಯುತ್ತೆ...
- ಆತ ಟಿವಿ ವಾರ್ತಾ ವಾಚಕನಾಗಿದ್ದರೆ!

★ ಫೀಚರ್ ಫಿಲಂಸ್ ಎಂದರೆ ಕಥಾ ಚಿತ್ರಗಳು.
-'ನಾನ್ ಫೀಚರ್ ಫಿಲಂಸ್' ಎಂದರೆ ಕಥೆ ಇಲ್ಲದಿದ್ದರೂ ಚಿತ್ರ ಮಾಡುತ್ತಾರಲ್ಲ... ಅವು ಇರಬಹುದೇ ?

-ಪಿ.ಶ್ರೀಧರ್ ನಾಯಕ್

ಒಬ್ಬ ಬ್ರಿಟಿಷ್ ಪ್ರಜೆ: ಶ್ಯಾನುಬೋಗರ ಮನೆಗೆ ಬಂದು, ಉಂಡು, ತೇಗಿ ಕೇಳಿದ 'ವಾಟ್ ಸ್ಪೆಷಲ್?'
ಶ್ಯಾನುಭೋಗ: ಅಪ್ಪನ ತಿಥಿ
ಬ್ರಿಟಿಷ್: ಕೂಡಲೆ ತನ್ನ ಜೇಬಿನಿಂದ ಸಾವಿರ ರೂಪಾಯಿ ಶ್ಯಾನುಭೋಗರ ಕೈಗಿತ್ತು ಹೇಳಿದ. 'ಟುಮಾರೋ ಡೂ ಮೈ ತಿಥಿ.'



★★★

ಒಬ್ಬ ಡಾಕ್ಟರ್ ಮತ್ತು ಸಂತಾ ಒಬ್ಬಳೇ ಹುಡುಗಿಯನ್ನು ಪ್ರೀತಿಸುತ್ತಿದ್ದರು.
ಡಾಕ್ಟರ್ ದಿನವೂ ಅವಳಿಗೆ ಗುಲಾಬಿ ಹೂ ಕೊಡುತ್ತಿದ್ದರೆ, ಸಂತಾ ದಿನವೂ ಒಂದೊಂದು ಸೇಬು ಕೊಡುತ್ತಿದ್ದ.
ಯಾಕೆ?
ಯಾಕೆಂದರೆ, 'ಆನ್ ಆ್ಯಪಲ್ ಎ ಡೇ ಕೀಪ್ ದಿ ಡಾಕ್ಟರ್ ಅವೇ' ಎಂದು ಸಂತಾನಿಗೆ ಗೊತ್ತಿತ್ತು.

★★★

ಆಕೆ ಕಾಲೇಜಿನ ಬ್ಯೂಟಿ. ಸೌಂದರ್ಯದ ಜತೆ ಬುದ್ಧಿವಂತಿಕೆಯೂ ಕಲೆತಿತ್ತು.
ಹೀಗಿರಲು ಒಬ್ಬ ಹೊಸ ವಿದ್ಯಾರ್ಥಿ ಕಾಲೇಜಿಗೆ ಸೇರ್ಪಡೆಯಾದ. ಮೊದಲ ದಿನವೇ ಸುಂದರಿಯ ಪರಿಚಯವಾಯಿತು.
ಆತ: 'ನಿಮ್ಮ ಹೆಸರೇನೆಂದು ಕೇಳಬಹುದೇ?'
ಆಕೆ: (ಬಿಂಕದಿಂದ) 'ಎಲ್ಲರೂ ನನ್ನನ್ನು ಅಕ್ಕಾ ಎಂದೇ ಕರೆಯುತ್ತಾರೆ.'
ಆತ: 'ಹೌದೇ, ನನ್ನನ್ನು ಎಲ್ಲರೂ ಭಾವಾ ಎಂದೇ ಕರೆಯುತ್ತಾರೆ.'

ಸಂಗ್ರಹ: ಶಾಲಿನಿ ವಿ. ಕಾಮತ್, ಮುಂಬೈ

ನ್ಯಾಯಾಧೀಶರು: ಅಲ್ಲಯ್ಯಾ 'ಡೈವೋರ್ಸ್' ಯಾಕೆ ಕೇಳ್ತಾ ಇದ್ದೀಯ?
ಭಗವಂತಪ್ಪ: ನನ್ನ ಹೆಂಡ್ತಿ ದಿನಾ ರಾತ್ರಿ ಹೊಡೀತಾಳೆ ಸಾ.
ನ್ಯಾಯಾಧೀಶರು: ಅಲ್ಲಯ್ಯಾ ಹೆಂಡ್ತಿ ಎಲ್ಲಾದ್ರೂ ಹೊಡೀತಾಳಾ?
ಭಗವಂತಪ್ಪ: ದಿನಾ ಕುಡಿದು ಬರ್‍ತೀನಲ್ಲಾ ಸಾ...

★★★

ಗಂಗಾ: 'ಲವ್'ಗೂ 'ಮ್ಯಾರೇಜ್'ಗೂ ಏನೆ ವ್ಯತ್ಯಾಸ?
ಸಿಂಧು: 'ಲವ್' ಅನ್ನೋದು ಗಮ್ ಇದ್ದ ಹಾಗೆ. 'ಮ್ಯಾರೇಜ್' ಅನ್ನೋದು ಫೆವಿಕಾಲ್ ಇದ್ದ ಹಾಗೆ. ಗಮ್ ಯಾವಾಗ ಬೇಕಾದರೂ ಬಿಟ್ಟುಕೊಳ್ಳಬಹುದು.

ಸಂಗ್ರಹ: ಗೌರಿಬಿದನೂರು ವಿ.ಸತ್ಯನಾರಾಯಣ ರಾವ್

